# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 1607 |
| 3 | ಉತ್ತರಿಸುವ ದಿನಾಂಕ | : | 19.12.2025 |
| 4 | ಉತ್ತರಿಸುವ ಸಚಿವರು | : | ಕಾರ್ಮಿಕ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವ ಬೀಡಿ ಕಾರ್ಮಿಕರಿಗೆ ಮಾಲೀಕರು ಭತ್ಯೆ (ಡಿಎ) ನೀಡದೆ ಸತಾಯಿಸುತ್ತಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | "ಬೀಡಿ ತಯಾರಿಕೆ" ಉದ್ದಿಮೆಯ ಕಾರ್ಮಿಕರಿಗೆ 2015-16 ನೇ ಸಾಲಿನಲ್ಲಿ ಪಾವತಿ ಮಾಡಬೇಕಾದ ವಿ.ಡಿ.ಎ ಪಾವತಿಸುವುದರಿಂದ ವಿನಾಯಿತಿ ನೀಡಿ ದಿನಾಂಕ: 08-04-2015 ರಂದು ಅಧಿಸೂಚನೆ ಹೊರಡಿಸಲಾಗಿತ್ತು.<br><br>ಸರ್ಕಾರದ ಈ ಆದೇಶವನ್ನು ಕಾರ್ಮಿಕ ಸಂಘಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಮಾನ್ಯ ನ್ಯಾಯಾಲಯದ ತೀರ್ಪಿನ ಮೇರೆಗೆ ಸರ್ಕಾರವು ಸದರಿ ಅಧಿಸೂಚನೆಯನ್ನು ದಿನಾಂಕ: 02-01-2017 ಮುಖಾಂತರ ಹಿಂಪಡೆದಿರುತ್ತದೆ.<br><br>ಐತನ್ಮಧ್ಯೆ, ತುಟ್ಟಿಭತ್ಯೆ ಪಾವತಿಸುವುದರಿಂದ ವಿನಾಯಿತಿ ನೀಡಿ ಹೊರಡಿಸಿದ್ದ ಆದೇಶವನ್ನು ಹಿಂಪಡೆದು ಸರ್ಕಾರವು ಹೊರಡಿಸಿದ್ದ ದಿನಾಂಕ: 02-01-2017 ರ ಅಧಿಸೂಚನೆಯನ್ನು ಮೆ: ಮಂಗಳೂರು ಗಣೇಶ ಬೀಡಿ ವರ್ಕ್ಸ್, ಮೈಸೂರು, ಇವರು ರಿಟ್ ಅರ್ಜಿ ಸಂಖ್ಯೆ: 11800/2019 ರಲ್ಲಿ ಪ್ರಶ್ನಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 23-02-2023 ರಂದು ಹೊರಡಿಸಿರುವ ತೀರ್ಪಿನಲ್ಲಿ 2015-16ನೇ ಸಾಲಿನ ತುಟ್ಟಿ ಭತ್ಯೆ ಪಾವತಿಗೆ ವಿನಾಯಿತಿ ನೀಡಿ, ಹೊರಡಿಸಿದ್ದ ಅಧಿಸೂಚನೆಯನ್ನು ಹಿಂಪಡೆದಿರುವ ಕ್ರಮ ಸೂಕ್ತವಾಗಿರುತ್ತದೆ ಎಂದು ತಿಳಿಸಿರುತ್ತದೆ.<br><br>ಗೌರವಾನ್ವಿತ ನ್ಯಾಯಾಲಯದ ತೀರ್ಪಿನ ಮೇರೆಗೆ ಬೀಡಿ ಕಾರ್ಮಿಕರಿಗೆ 2015-16ನೇ ಸಾಲಿನ ಹಿಂಬಾಕಿ ತುಟ್ಟಿ ಭತ್ಯೆ ಪಾವತಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ, ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ದಿನಾಂಕ: 11-04-2023 ರಂದು ಸೂಚಿಸಲಾಗಿತ್ತು. |

| | | |
|---|---|---|
| | | ಮುಂದುವರಿದು, ಮೆ: ಭಾರತ್ ಬೀಡಿ ವರ್ಕ್ಸ್ ಪ್ರೈ. ಲಿಮಿಟೆಡ್, ಮಂಗಳೂರು, ಇವರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:27186/2017 ಸಲ್ಲಿಸಿ, ಸರ್ಕಾರವು ದಿನಾಂಕ: 02-01-2017 ರಂದು ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ. ಗೌರವಾನ್ವಿತ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ದಿನಾಂಕ: 19-09-2023 ರಂದು ಹೊರಡಿಸಿರುವ ತೀರ್ಪಿನಲ್ಲಿ ದಿನಾಂಕ: 02-1-2017ರ ಅಧಿಸೂಚನೆಯನ್ನು ವಜಾಗೊಳಿಸಿರುತ್ತದೆ.<br><br>ರಿಟ್ ಅರ್ಜಿ ಸಂಖ್ಯೆ: 11800/2019 ರಲ್ಲಿ ಗೌರವಾನ್ವಿತ ಉಚ್ಛ ನ್ಯಾಯಾಲಯವು ದಿನಾಂಕ: 02-01-2017 ರ ಸರ್ಕಾರದ ಅಧಿಸೂಚನೆ ಸೂಕ್ತವಾಗಿರುತ್ತದೆ ಎಂದು ಎತ್ತಿ ಹಿಡಿದಿದ್ದರೆ, ರಿಟ್ ಅರ್ಜಿ ಸಂಖ್ಯೆ: 27186/2017 ರಲ್ಲಿ ದಿನಾಂಕ: 19-09-2023 ರಂದು ಹೊರಡಿಸಿರುವ ತೀರ್ಪಿನಲ್ಲಿ ಅದೇ ಅಧಿಸೂಚನೆಯನ್ನು ವಜಾಗೊಳಿಸಿರುತ್ತದೆ. ಆದುದರಿಂದ, ವಿ.ಡಿ.ಎ ಪಾವತಿಗೆ ಸಂಬಂಧಿಸಿದಂತೆ, ಗೌರವಾನ್ವಿತ ಉಚ್ಛ ನ್ಯಾಯಾಲಯವು ನೀಡಿರುವ ಎರಡೂ ತೀರ್ಪುಗಳು ವ್ಯತಿರಿಕ್ತವಾಗಿರುತ್ತವೆ.<br><br>ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಿಟ್ ಅರ್ಜಿ ಸಂಖ್ಯೆ: 27186/2017 ರಲ್ಲಿ ದಿನಾಂಕ: 19-09-2023 ರಂದು ಹೊರಡಿಸಿರುವ ತೀರ್ಪನ್ನು ಪುನರ್ ಪರಿಶೀಲಿಸುವ ಸಲುವಾಗಿ ಪುನರ್ ಪರಿಶೀಲನಾ ಅರ್ಜಿ ಸಂಖ್ಯೆ: 257/2024 ನ್ನು ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದು, ದಿನಾಂಕ: 03-06-2024 ರಂದು ಸರ್ಕಾರದ ಪರವಾಗಿ ಅಫಿಡವಿಟ್ ಸಲ್ಲಿಸಲಾಗಿದ್ದು, ಅಗತ್ಯ ಹಿಂಬಾಲಿಕಾ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗೌರವಾನ್ವಿತ ನ್ಯಾಯಾಲಯವು ನೀಡುವ ತೀರ್ಪನ್ನು ಆಧರಿಸಿ, ಕ್ರಮ ವಹಿಸಲಾಗುವುದು.<br><br>ಮುಂದುವರಿದು, ಬೀಡಿ ತಯಾರಿಕೆ ಅನುಸೂಚಿತ ಉದ್ದಿಮೆಗೆ ದಿನಾಂಕ: 27-02-2025 ರಂದು ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯ ದರಗಳನ್ನು ಕಾರ್ಮಿಕರಿಗೆ ಪಾವತಿಸಲು ಬೀಡಿ ಮಾಲೀಕರು ಬಾದ್ಯಸ್ಥರಿರುತ್ತಾರೆ. ಸದರಿ ದರಗಳನ್ನು |

| | | |
|---|---|---|
| | | ಅನುಷ್ಠಾನಗೊಳಿಸುವಂತೆ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಸೂಚಿಸಲಾಗಿದ್ದು, ಅಧಿಸೂಚನೆಯ ದರಗಳನ್ನು ಪಾವತಿಸದಿದ್ದಲ್ಲಿ ಕಾರ್ಯವ್ಯಾಪ್ತಿಯ ಕ್ಲೇಮ್ ಪ್ರಾಧಿಕಾರಿಗಳ ಮುಂದೆ ಕ್ಲೈಮ್ ಅರ್ಜಿ ದಾಖಲಿಸಿ ಪರಿಹಾರ ಪಡೆಯಬಹುದಾಗಿರುತ್ತದೆ. |
| ಆ) | ಮಂಗಳೂರು ಮತು ಉಡುಪಿ ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚು ಬೀಡಿ ಕಾರ್ಮಿಕರು ಇದ್ದು ಇವರ ಆರೋಗ್ಯ ದೃಷ್ಟಿಯಲ್ಲಿ ನಡೆಸುತ್ತಿರುವ ಔಷದಾಲಯ (Dispensary) ಸರಿಯಾಗಿ ಕಾರ್ಯನಿರ್ವಹಿಸದೇ ಆರೋಗ್ಯದ ಮೇಲೆ ಪರಿಣಾಮ ಉಂಟಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀಡಿ ಕಾರ್ಮಿಕರ ಔಷಧಾಲಯ (Dispensary) ನಡೆಸುವುದು ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ Central Labour Welfare Board ರವರ ವ್ಯಾಪ್ತಿಗೆ ಒಳಪಡುತ್ತದೆ. |
| ಇ) | ಉಭಯ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಆರೋಗ್ಯ ಘಟಕಗಳಿವೆ; ಬೀಡಿ ಕಾರ್ಮಿಕರು ಸಂಖ್ಯೆ ಎಷ್ಟು? ರಾಜ್ಯದಲ್ಲಿ ಒಟ್ಟು ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು? | ದಕ್ಷಣ ಕನ್ನಡ ಜಿಲ್ಲೆಯಲ್ಲಿ **9** ಹಾಗೂ ಉಡುಪಿ ಜಿಲ್ಲೆಯಲ್ಲಿ **3** ಆರೋಗ್ಯ ಘಟಕಗಳಿವೆ. ಈ ಎರಡೂ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರ ಸಂಖ್ಯೆಯ ಕುರಿತು ಇಲಾಖೆ ವತಿಯಿಂದ ಯಾವುದೇ ಸಮೀಕ್ಷೆಯನ್ನು ಕೈಗೊಳ್ಳಲಾಗಿರುವುದಿಲ್ಲ. ಆದರೆ ಬೀಡಿ ಮತ್ತು ಸಿಗಾರ್ ಕಾಯ್ದೆಯಡಿ ನೋಂದಣಿ ಹಾಗೂ ಪರವಾನಗಿ ಪಡೆದಿರುವ ಸಂಸ್ಥೆಗಳಲ್ಲಿ ಹಾಗೂ ಗುತ್ತಿಗೆದಾರರಡಿ ಕೆಲಸ ಮಾಡುವ ಬೀಡಿ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು **1,94,481** ಮತ್ತು ಉಡುಪಿ ಜಿಲ್ಲೆಯಲ್ಲಿ ಸರಿ ಸುಮಾರು **38,374** ಬೀಡಿ ಕಾರ್ಮಿಕರಿದ್ದು ರಾಜ್ಯದಲ್ಲಿರುವ ಒಟ್ಟು ಬೀಡಿ ಕಾರ್ಮಿಕರ ಸಂಖ್ಯೆ – **2,51,474** ಆಗಿರುತ್ತದೆ. |
| ಈ) | ಬೀಡಿ ಕಟ್ಟುವ ಉದ್ದಿಮೆಯಲ್ಲಿ ಶೇಕಡ 80 ರಷ್ಟು ಮಹಿಳೆಯರು ಕಾರ್ಯ ನಿರ್ವಹಿಸುತ್ತಿದ್ದು ಪ್ರಸ್ತುತ ಈ ಉದ್ದಿಮೆಯು ನಶಿಸಿ ಹೋಗುತ್ತಿದ್ದು, ಇದಕ್ಕೆ ಸಮಾನವಾದ ಬದಲಿ ಕೆಲಸವನ್ನು ಪುನರ್ ವಸತಿಯನ್ನು ನಿರ್ಮಾಣ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಈ ಬಗ್ಗೆ ಸರ್ಕಾರದ ಚಿಂತನೆ ಏನು; (ವಿವರ ನೀಡುವುದು) | ನಶಿಸಿ ಹೋಗುತ್ತಿರುವ ಬೀಡಿ ಉದ್ದಿಮೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ಸದರಿ ಕೆಲಸದ ಬದಲಿಗೆ ಬದಲಿ ಉದ್ಯೋಗ ದೊರಕಿಸಿಕೊಟ್ಟು ಪುನರ್ವಸತಿ ಗೊಳಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಉ) | ಬೀಡಿ ಕಾರ್ಮಿಕರಿಗೆ ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ಸವಲತ್ತುಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| ಊ) | ಬೀಡಿ ಕಾರ್ಮಿಕರಿಗೆ ಮನೆ ಕಟ್ಟಲು ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ (ಸ್ಕಾಲರ್‌ಶಿಪ್) ನೀಡದೆ ಇರುವುದು ಸರ್ಕಾರ ಗಮನಿಸಿದೆಯೇ; | ಬೀಡಿ ಕಾರ್ಮಿಕರಿಗೆ ಮನೆ ಕಟ್ಟಲು ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ (ಸ್ಕಾಲರ್‌ಶಿಪ್) ನೀಡುವುದು ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ Central Labour Welfare Board ರವರ ವ್ಯಾಪ್ತಿಗೆ ಒಳಪಡುತ್ತದೆ. |
| ಋ) | ಬೀಡಿ ಕಾರ್ಮಿಕರಿಗೆ ಪ್ರತ್ಯೇಕ ಕಾಲೋನಿಗಳನ್ನು ರಚಿಸಿ ಗಾರ್ಮೆಂಟ್ಸ್ ಇಂಡಸ್ಟ್ರಿಯಲ್ ನಿರ್ಮಾಣ ಮಾಡಿ ಅವರ ಬದುಕಿಗೆ ದಾರಿ ತೋರಿಸಲು ಇಲಾಖೆ ಕ್ರಮ ಕೈಗೊಳ್ಳುವುದೇ?(ವಿವರ ನೀಡುವುದು ) | ಬೀಡಿ ಕಾರ್ಮಿಕರಿಗೆ ಪ್ರತ್ಯೇಕ ಕಾಲೋನಿಗಳನ್ನು ರಚಿಸಿ ಗಾರ್ಮೆಂಟ್ಸ್ ಇಂಡಸ್ಟ್ರಿಯಲ್ ನಿರ್ಮಾಣ ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆ ಇಲಾಖಾವತಿಯಿಂದ ಇರುವುದಿಲ್ಲ. |

**ಸಂಖ್ಯೆ: ಕಾಇ 620 ಎಲ್ ಡಬ್ಲ್ಯೂಎ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**